ಆ) ಕಾಡಾನೆಗಳನ್ನು ಓಡಿಸಲು ಅರಣ್ಯ ಸಿಬ್ಬಂದಿ/ಪೊಲೀಸರು ಮತ್ತು ಸಾರ್ವಜನಿಕರ ಸಹಾಯದಿಂದ ಅವಿರತ ಪ್ರಯತ್ನ ನಡೆಸಿ, ಆನೆಗಳನ್ನು ಅರಣ್ಯಕ್ಕೆ ಓಡಿಸುವಲ್ಲಿ ಯಶಸ್ವಿಯಾಗಿರುತ್ತದೆ. ಬೆಳೆನಾಶವಾದ ಪ್ರಕರಣಗಳಲ್ಲಿ ಸೂಕ್ತ ಪರಿಹಾರ ನೀಡಲು ಕ್ರಮ ಜರುಗಿಸಲಾಗುತ್ತಿದೆ.

ಇ) 2006–2007ನೇ ಸಾಲಿನಲ್ಲಿ ಕಾಡಾನೆಗಳ ತುಳಿತಕ್ಕೆ ಸಿಕ್ಕಿ ಸತ್ತವರ ಸಂಖ್ಯೆ ಈ ಕೆಳಕಂಡಂತಿರುತ್ತದೆ.

1. ಗೋಕಾಕ ವಿಭಾಗ, ಘಟಪ್ರಭ–1

2. ಬೆಳಗಾವಿ ವಿಭಾಗ, ಬೆಳಗಾವಿ–1 (ಒಟ್ಟು–2)

ಈ) ಮೃತಪಟ್ಟವರ ಕುಟುಂಬಕ್ಕೆ ದಿನಾಂಕ: 12.2.2002 ರ ಸರ್ಕಾರದ ಆದೇಶದ ಪ್ರಕಾರ ಪರಿಹಾರಧನ ಪ್ರತಿ ಕುಟುಂಬಕ್ಕೆ ರೂ. ಒಂದು ಲಕ್ಷದಂತೆ ರೂ.2,00,000/– (ರೂ. ಎರಡು ಲಕ್ಷ) ನೀಡಲಾಗಿದೆ.

ಉ) ಇಂತಹ ಘಟನೆಗಳು ಅರಣ್ಯ ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿತನದಿಂದ ನಡೆಯುತ್ತಿಲ್ಲ.

172 (139) : ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) – ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸಕ್ತ ವರ್ಷ ಸಾರಾಯಿ ಮಾರಾಟದಿಂದ ರಾಜ್ಯ ಸರ್ಕಾರಕ್ಕೆ ಬಂದ ಆದಾಯವೆಷ್ಟು;

ಆ) ಈ ವರ್ಷ ಸಾರಾಯಿ ಗುತ್ತಿಗೆದಾರರು ಗುತ್ತಿಗೆ ಮೊತ್ತವನ್ನು ಸರಿಯಾಗಿ ರಾಜ್ಯ ಸರ್ಕಾರಕ್ಕೆ ಕಟ್ಟಿದ್ದಾರೆಯೇ; ಬಾಕಿ ಹಣ ಉಳಿದಿದೆಯೇ;

ಇ) ಬಾಕಿ ಉಳಿದ ಹಣ ಎಷ್ಟು ?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)–

ಅ) 2006–07ನೇ ಆರ್ಥಿಕ ವರ್ಷದಲ್ಲಿ ಸಾರಾಯಿಯಿಂದ 1906.28 ಕೋಟಿ ರೂಪಾಯಿಗಳ ಆಧಾಯವು ಬರುವ ನಿರೀಕ್ಷೆ ಹೊಂದಲಾಗಿದ್ದು ಇದುವರೆವಿಗೂ (ಡಿಸೆಂಬರ್ 2006ರ ಅಂತ್ಯಕ್ಕೆ) ಸರ್ಕಾರಕ್ಕೆ 1267.98 ಕೋಟಿ ರೂ.ಗಳ ಆದಾಯ ಸಂಗ್ರಹವಾಗಿರುತ್ತದೆ.

ಆ) 2006–07ನೇ ಸಾಲಿನಲ್ಲಿ ಅಂದರೆ ದಿನಾಂಕ: 01.04.2006 ರಿಂದ 31.12.2006ರ ವರೆಗಿನ 9 ತಿಂಗಳ ಅವಧಿಯಲ್ಲಿ ಸಾರಾಯಿ ಬಾಡಿಗೆ ಹಣದ

ಬೇಡಿಕೆಯಾದ ರೂ.1440.63 ಕೋಟಿಗಳ ಪೈಕಿ ಈವರೆಗೆ ರೂ.1311.77 ಕೋಟಿ ರೂ.ಗಳನ್ನು ಸಾರಾಯಿ ಗುತ್ತಿಗೆದಾರರು ಸರ್ಕಾರಕ್ಕೆ ಪಾವತಿಸಿರುತ್ತಾರೆ. ರೂ.128.86 ಕೋಟಿ ಬಾಕಿ ಇರುತ್ತದೆ.

173 (792) : ಶ್ರೀ ಬಾಲರಾಜ್ ಎಸ್. (792) – ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಳಂದೂರು ತಾಲ್ಲೂಕಿನ ಮುನೇಶ್ವರ ಬೇಸಾಯಗಾರರ ಸಹಕಾರ ಸಂಘ ಹಾಗೂ ವೈ.ಕೆ. ಮೋಳೆ ಸಂಘಗಳ ಹಾಗೂ ಬಡರೈತರ ಜಮೀನುಗಳನ್ನು ಅರಣ್ಯ ಇಲಾಖೆಯ ವ್ಯಾಪ್ತಿಗೆ ಸೇರಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಬಡ ರೈತರಿಗೆ ಸ್ವಂತ ಜಮೀನುಗಳಲ್ಲಿ ವ್ಯವಸಾಯ ಮಾಡಲು ಅವಕಾಶ ಮಾಡಿಕೊಡದೆ ಮತ್ತು ಪರಿಹಾರವನ್ನು ನೀಡದೇ ಸತಾಯಿಸುತ್ತಿರುವುದಕ್ಕೆ ಕಾರಣಗಳೇನು;

ಇ) ಈ ಬಗ್ಗೆ ಕ್ರಮ ಕೈಗೊಂಡಿದ್ದಲ್ಲಿ, ಅದು ಈಗ ಯಾವ ಹಂತದಲ್ಲಿದೆ;

ಈ) ಎಷ್ಟು ಅವಧಿಯೊಳಗೆ ಈ ಸಮಸ್ಯೆಯನ್ನು ಪರಿಹರಿಸಲಾಗುವುದು?

ಶ್ರೀ ಸಿ. ಸನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)–

ಅ) ಪ್ರಶ್ನಿತ ಸಂಘಗಳ ಸದಸ್ಯರುಗಳಿಗೆ ಹಂಚಿಕೆಯಾಗಿದೆ ಎನ್ನಲಾದ ಸರ್ಕಾರಿ ಭೂಮಿಯು ಯಳಂದೂರು ತಾಲ್ಲೋಕಿನ ಮದ್ದೂರು ಗ್ರಾಮದ ಸರ್ವೆ ನಂ: 971 ಕ್ಕೆ ಸೇರಿದ್ದಾಗಿದೆ. ಈ ಸರ್ವೆ ನಂ: 971 ರಲ್ಲಿ ಸುಮಾರು 72 ಎಕರೆ ಕಂದಾಯ ಭೂಮಿಯನ್ನು ಸರ್ಕಾರಿ ಆದೇಶ ಸಂಖ್ಯೆ: ಆರ್.ಡಿ.ಎಲ್.ಡಿ.52 ದಿನಾಂಕ: 1.8.1964 ಮತ್ತು 6.7.1965 ರಂತೆ ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿದೆ. ವರ್ಗಾವಣೆಯಾದ ಈ ಭೂಮಿಯು ದಟ್ಟ ಅರಣ್ಯ ಪ್ರದೇಶವಾಗಿದ್ದು, ವನ್ಯಜೀವಿಗಳಿಂದ ಕೂಡಿದ್ದು ಹಾಲಿ ಬಿಆರ್‌ಟಿ ವನ್ಯಧಾಮದ ವ್ಯಾಪ್ತಿಗೆ ಸೇರಿಕೊಂಡು ಈ ಪ್ರದೇಶದ ಸುತ್ತಲೂ ಆನೆ ಕಂದಕ ತೆಗೆಯಲಾಗಿದೆ. ಅಲ್ಲದೇ ಈ ಸರ್ವೆ ನಂ. 971 ರಲ್ಲಿ ವರ್ಗಾವಣೆಯಾದ ಎಲ್ಲಾ ಅರಣ್ಯ